# ಜನರ ಮನ ಮುಟ್ಟಲು ಟೀವಿ

## ಚೇತನ್ ಚಂದ್ರ
### ಉದಯದ 'ನಾನು ನನ್ನ ಕನಸು'ವಿನ ಕಾರ್ತಿಕ್

◆ **ಸಿನಿಮಾಕ್ಕೆ ಬಂದಿದ್ದು ಹೇಗೆ?**

ಎಂಜಿನಿಯರಿಂಗ್ ಎರಡನೇ ವರ್ಷ ಓದುತ್ತಿದ್ದಾಗಲೇ ಸಿನಿಮಾಕ್ಕೆ ಅವಕಾಶ ಸಿಕ್ಕಿತು. ಪಿಯುಸಿ ಮೊದಲ ಸಿನಿಮಾ. ನಂತರ ಬಣ್ಣವನ್ನು ಒಲಿಸಿಕೊಳ್ಳಬೇಕಿತ್ತು ಅದಕ್ಕಾಗಿ ರಂಗಚಟುವಟಿಕೆ ಆರಂಭಿಸಿದೆ. 'ರಂಗನಿರಂತರ' ತಂಡದ ಗರಡಿಯಲ್ಲಿ ತಾಲೀಮು ಆರಂಭಿಸಿದೆ. ಬೀದಿ ನಾಟಕಗಳು ಸೇರಿದಂತೆ ಹಲವಾರು ಗಂಭೀರ ನಾಟಕಗಳನ್ನು ಆಡಿದ್ದೇನೆ. ಇದರ ಜೊತೆಗೆ ಸಿನಿಮಾಗಳನ್ನೂ ಮಾಡುತ್ತಿದ್ದೇನೆ. ಇಲ್ಲಿ ನೆಲೆಯೂರಿ ಹದಿಮೂರು ವರ್ಷಗಳು ಕಳೆದಿವೆ. ಇದುವರೆಗೂ ಸುಮಾರು ಹದಿನೈದು ಸಿನಿಮಾಗಳಲ್ಲಿ ನಟಿಸಿದ್ದೇನೆ. ಇನ್ನೂ ಮೂರ್ನಾಲ್ಕು ಸಿನಿಮಾಗಳು ತೆರೆಕಾಣಬೇಕಿದೆ.

'ಮೊಗ್ಗಿನ ಮನಸ್ಸು' ಸಿನಿಮಾ ನಿರ್ದೇಶಕ ಶಶಾಂಕ್ ನನ್ನನ್ನು ಒಂದು ಕಾರ್ಯಕ್ರಮದಲ್ಲಿ ನೋಡಿ ಸಿನಿಮಾಗೆ ಆಹ್ವಾನಿಸಿದರು. ಅದೇ ಸಮಯದಲ್ಲಿ 'ಪಿಯುಸಿ' ಮತ್ತು 'ಪ್ರೇಮಿಸಂ' ಸಿನಿಮಾಗಳಿಗೆ ಆಡಿಷನ್ ಕೊಟ್ಟು ಪಾತ್ರವನ್ನು ಗಿಟ್ಟಿಸಿಕೊಂಡಿದ್ದೆ. ಆಮೇಲೆ ಬಿಡುವು ಇಲ್ಲದಂತೆ ಬಣ್ಣ ಹಚ್ಚುತ್ತಿದ್ದೇನೆ.

◆ **ಸಮಯದ ನಿರ್ವಹಣೆಯನ್ನು ಹೇಗೆ ಮಾಡುತ್ತೀರಿ?**

ನಮಗೆ ಇಷ್ಟದ ಕೆಲಸವನ್ನೇ ನಾವು ಮಾಡುವ ಸಂದರ್ಭ ಬಂದರೆ ಅದು ಎಷ್ಟೇ ಸಂಕೀರ್ಣವಾದರೂ ನಿಭಾಯಿಸಬಹುದು ಎಂದೆನಿಸುತ್ತದೆ. ಒಂದು ತಿಂಗಳ ನಾಲ್ಕುವಾರಗಳನ್ನು ಬೇರೆ ಬೇರೆ ಶೆಡ್ಯೂಲ್ ಮಾಡಿಕೊಂಡು ವರ್ಗೀಕರಿಸಿಕೊಳ್ಳುತ್ತೇನೆ. ಅದರ ಅನುಸಾರ ನನ್ನ ಸಮಯವನ್ನು ವಿನಿಯೋಗ ಮಾಡುತ್ತೇನೆ. ಇಲ್ಲಿ ಓಡಾಟ ಜಾಸ್ತಿ ಇರುತ್ತದೆ. ಕೆಲವೊಮ್ಮೆ ಹಗಲು ರಾತ್ರಿ ಎನ್ನದೆ ಕೆಲಸ ಮಾಡಬೇಕಾಗುತ್ತದೆ. ಏನೇ ಆದರೆ ನನ್ನ ವಯಸ್ಸು ಕಷ್ಟಪಡುವ ಕಾಲ ಎಂದು ನಾನು ಅಂದುಕೊಂಡಿದ್ದೇನೆ.

◆ **ಸಿನಿಮಾದಿಂದ ಬಂದ ನಿಮಗೆ ಟೀವಿಯ ಸವಾಲುಗಳು ಹೇಗೆನಿಸುತ್ತವೆ?**

ಸಿನಿಮಾ ರಂಗಭೂಮಿ ಟೀವಿ ಎಲ್ಲ ಬಣ್ಣದ ಜಗತ್ತು. ಎಲ್ಲದಕ್ಕೂ ಅದರದೇ ಆದ ಪರಿಮಿತಿ ಮತ್ತು ವಿಸ್ತಾರ ಇರುತ್ತದೆ. ಎಲ್ಲದರಲ್ಲೂ ನಟನೆಯನ್ನೇ ಮಾಡಿದರೂ ಸ್ವಲ್ಪ ವ್ಯತ್ಯಾಸ ಇದ್ದೇ ಇರುತ್ತದೆ. ಧಾರಾವಾಹಿಯಲ್ಲಿ ನಿತ್ಯ ಹಲವು ಸೀನ್‌ಗಳ ಚಿತ್ರೀಕರಣ ಮಾಡುತ್ತೇವೆ. ಸಿನಿಮಾದಲ್ಲಿ ಒಂದೇ ಒಂದು ಸೀನ್ ಮಾಡುತ್ತೇವೆ, ಹೆಚ್ಚೆಂದರೆ ಎರಡು. ಸೀರಿಯಲ್‌ನಲ್ಲಿ ಜಾಸ್ತಿ ಕೆಲಸ ಮಾಡಬೇಕು. ಇಲ್ಲಿ ಕೆಲಸದ ಒತ್ತಡ ಜಾಸ್ತಿ ಇರುತ್ತದೆ. ಕೆಲವೊಮ್ಮೆ ಧಾರಾವಾಹಿಗಳ ಡೈಲಾಗ್ ಒಂದೆರಡು ಪುಟ ಇರುತ್ತದೆ. ನಿತ್ಯವೂ ಕಂಟೆಂಟ್ ಕೊಡಲೇಬೇಕು. ರಂಗಭೂಮಿಯಲ್ಲಿ ಮಾಡಿದ ರೀತಿ ಟೀವಿಯಲ್ಲಿ ಮಾಡಲು ಆಗುವುದಿಲ್ಲ. ಟೀವಿಯಂತೆ ಸಿನಿಮಾದಲ್ಲಿ ಮಾಡುವುದಿಲ್ಲ. ವ್ಯತ್ಯಾಸ ಇದ್ದರೂ ಅದನ್ನು ಹೀಗೆ ಎಂದು ಗುರುತಿಸಲು ಆಗುವುದಿಲ್ಲ. ಬಣ್ಣ ಹಚ್ಚಿದಾಗಲೇ ಅದು ಗೊತ್ತಾಗುತ್ತದೆ. ನಮಗಿಂತ ಅದನ್ನು ವೀಕ್ಷಕರು ಸೂಕ್ಷ್ಮವಾಗಿ ಗುರುತಿಸಬಹುದು. ನಾನು ನಿರ್ದೇಶಕರಿಗೆ ವ್ಯತ್ಯಾಸ ಏನಾದರೂ ಆದರೆ ಎಚ್ಚರಿಸಿ ಎಂದು ಮನವಿ ಮಾಡಿಕೊಂಡಿರುತ್ತೇನೆ. ನಟನಿಗೆ ತಾಂತ್ರಿಕ ಬದಲಾವಣೆ ದೊಡ್ಡ ಸವಾಲಲ್ಲ.

◆ **ನಟನೆ ಬಿಟ್ಟು ಬೇರೆ ಇನ್ನೇನಾದರೂ ಮಾಡುವ ಕನಸು ಇದೆಯಾ?**

ಅಭಿನಯದಲ್ಲಿ 13 ವರ್ಷ ಆಗಿದೆ. ಆದರೆ ಇಲ್ಲೇ ಮುಂದುವರಿಯಬೇಕು. ಒಬ್ಬ ನಟನಾಗಿ ಪಕ್ವಗೊಳ್ಳಬೇಕು ಎಂದರೆ ಕಲಾ ಕೃತಿಯೊಂದರ ಎಲ್ಲಾ ಆಯಾಮಗಳ ಪರಿಚಯ ಇರಬೇಕು. ಲೈಟಿಂಗ್– ಕ್ಯಾಮೆರಾ, ಡಬ್ಬಿಂಗ್, ಡೈಲಾಗ್... ಅದೆಲ್ಲ ಗೊತ್ತಿದ್ದರೆ ಮಾತ್ರ ನಟನೆಯನ್ನು ಚೆನ್ನಾಗಿ ಮಾಡಲು ಸಾಧ್ಯ. ಒಬ್ಬ ನಿರ್ದೇಶಕ, ಕ್ಯಾಮೆರಾದವರಿಗೂ ಕೂಡ ಎಲ್ಲವೂ ಗೊತ್ತಿರಬೇಕು. ಆ ಮಟ್ಟಿಗೆ ನಾನು ತಿಳಿದುಕೊಂಡಿದ್ದೇನೆ. ನಟನಾಗಿಯೇ ಇನ್ನೂ ಸಾಕಷ್ಟು ಕಲಿಯಬೇಕಿದೆ. ಮುಂದೆ ಕಾಲ ಹೇಗೆ ನಡೆಸುತ್ತದೆಯೋ ನೋಡಬೇಕು.

◆ **ಟೀವಿಗೆ ಬಂದಿದ್ದು ಏಕೆ?**

ಸಿನಿಮಾದಿಂದ ಸೀರಿಯಲ್‌ಗೆ ಜನರನ್ನು ತಲುಪಬಹುದು ಎನ್ನುವ ಕಾರಣಕ್ಕೆ ಬಂದಿದ್ದೇನೆ. ಸುಮಾರಷ್ಟು ಊರಿನಲ್ಲಿ ಚಿತ್ರಮಂದಿರಗಳೇ ಇರುವುದಿಲ್ಲ. ನಾವು ಮಾಡಿದ ಸಿನಿಮಾ ಇರುವ ಎಲ್ಲ ಚಿತ್ರಮಂದಿರಗಳಲ್ಲಿ ತೆರೆಕಾಣುವುದಿಲ್ಲ. ಟೀವಿ ಆದರೆ ಹಾಗಲ್ಲ, ಊರು–ಕೇರಿ ಮಾತ್ರವಲ್ಲದೆ ಹಾಡಿಗಳಲ್ಲಿಯೂ ನೆಲೆಯೂರಿದೆ. ಟೀವಿ ಮನೆ ಮನೆಯಲ್ಲಿಯೂ ಇರುವುದರಿಂದ ಸುಲಭವಾಗಿ ನಟನಾಗಿ ಅವರ ಮನವನ್ನು ತಲುಪಬಹುದು. ಆ ಮೂಲಕ ನಮ್ಮ ಜನಪ್ರಿಯತೆ ಹೆಚ್ಚಿಸಿಕೊಳ್ಳಲು ಸಾಧ್ಯವಾಗುತ್ತದೆ ಎನ್ನುವ ನಿಲುವು ನನ್ನದು.

◆ **ಕಾರ್ತಿಕ್ ಪಾತ್ರದ ಬಗ್ಗೆ ಹೇಳುವುದಾದರೆ...**

'ಅಣ್ಣಯ್ಯ' ಸಿನಿಮಾದ ನಾಯಕ ಅಣ್ಣಯ್ಯನಷ್ಟೇ ಒಳ್ಳೆಯ ಹುಡುಗ. ಕಾರ್ತಿಕ್ ಕೂಡ ತುಂಬ ಮುಗ್ಧ. ತನ್ನ ತಾಯಿ ಬಿಟ್ಟು ಬೇರೆ ಎಲ್ಲದೂ ನಶ್ವರ ಎಂಬ ಭಾವನೆ ಆತನಿಗಿದೆ. ಪಾತ್ರಕ್ಕೆ ನೂರಕ್ಕೆ ನೂರರಷ್ಟು ನ್ಯಾಯ ಒದಗಿಸುವುದು ನನ್ನ ಕರ್ತವ್ಯ. ನಾನು ಹೇಗೆ ಮಾಡುತ್ತೇನೆ ಎನ್ನುವುದು ನನಗಿಂತ ವೀಕ್ಷಕರಿಗೆ ಗೊತ್ತು. ಕ್ರಿಕೆಟ್ ಆಡುವವರಿಗಿಂತ, ಕ್ರಿಕೆಟ್ ನೋಡುವವರಿಗೆ ಆಟಗಾರನ ತಪ್ಪು ಕಾಣಿಸುತ್ತದೆ.

◆ **ನಟನಾಗಬೇಕೆಂದರೆ ಏನು ಮಾಡಬೇಕು?**

ನಮ್ಮ ಬಗ್ಗೆ ನಮಗೆ ಸರಿಯಾದ ನಿರ್ದೇಶನ ಇರಬೇಕು. ನಾವು ವೃತ್ತಿಯನ್ನು ಗಂಭೀರವಾಗಿ ತೆಗೆದುಕೊಂಡರೆ ಅದೂ ನಮ್ಮನ್ನು ಗಂಭೀರವಾಗಿ ತೆಗೆದುಕೊಳ್ಳುತ್ತದೆ. ಯಾವುದೇ ವ್ಯವಹಾರ ಮಾಡಬೇಕು ಎಂದರೆ ಕ್ಷೇತ್ರ ಅಧ್ಯಯನ ಮಾಡಿ ಹೂಡಿಕೆಯನ್ನು ಮಾಡುತ್ತೇವೆ. ಇಲ್ಲಿ ನಮ್ಮನ್ನೇ ನಾವು ಹೂಡಿಕೆ ಮಾಡುತ್ತಿದ್ದೇವೆ ಎನ್ನುವ ಅರಿವು ಇದ್ದರೆ ಖಂಡಿತ ಇಲ್ಲಿ ನೆಲೆಗೊಳ್ಳಬಹುದು ಎನ್ನುವುದು ನನ್ನ ಅನ್ನಿಸಿಕೆ.



■ **ರಾಘವೇಂದ್ರ ಕೆ.**